ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 02 ಡಿವಿಪಿ (1) 2015(೭)

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು 560 001.
ದಿನಾಂಕ: 16-02-2016.

**ಅಧಿಕೃತ ಜ್ಞಾಪನ**

**ವಿಷಯ:** ರಾಷ್ಟ್ರೀಯ ಮಾನ್ಯತಾ ಮಂಡಳ, ನವದೆಹಲಿ ಇವರಿಂದ ಮಾನ್ಯತೆ ಪಡೆಯುವ ಸಲುವಾಗಿ ಮೊದಲ ಹಂತದ ತಾಂತ್ರಿಕ ಶಿಕ್ಷಣ ಸಂಸ್ಥೆಗಳಗೆ ನೊಂದಣಿ ಶುಲ್ಕವನ್ನು ಭರಿಸಲು ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ: ಇಡಿ 19 ಹೆಚ್‌ಪಿಟಿ 2015, ದಿನಾಂಕ 09-04-2015, 29-04-2015
2. ಸರ್ಕಾರದ ಆದೇಶ ಸಂಖ್ಯೆ: ಇಡಿ 19 ಹೆಚ್‌ಪಿಟಿ 2015(ಭಾಗ-1) ಬೆಂಗಳೂರು ದಿನಾಂಕ 19-12-2015
3. ಈ ಕಛೇರಿ ಜ್ಞಾಪನ ಸಂಖ್ಯೆ: ಡಿಟಿಇ/35/ಎಲ್‌ಆರ್‌ಡಿಸಿ/ಎನ್‌ಬಿಎ/2014-15, ದಿನಾಂಕ 09-02-2016

ಮೇಲೆ ನಮೂದಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರ ಆದೇಶಗಳಲ್ಲಿ ಸರ್ಕಾರವು ತಾಂತ್ರಿಕ ಶಿಕ್ಷಣ ಇಲಾಖೆಯಡಿ ಮುಂದುವರೆಯುತ್ತಿರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು ಹಾಗೂ ಸರ್ಕಾರಿ ಪಾಲಿಟೆಕ್ನಿಕ್‌ಗಳ ಯೋಜನಾ ಕಾರ್ಯಕ್ರಮಗಳನ್ನು 2015-16 ನೇ ಸಾಲಿಗೆ ಮುಂದುವರೆಸಿ, ಮೊದಲನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡಲು ಅನುಮತಿ ಆದೇಶವನ್ನು ನೀಡಿರುತ್ತದೆ.

ಉಲೇಖ (2) ರ ಸರ್ಕಾರದ ಆದೇಶದಲ್ಲಿ ಲೆಕ್ಕ ಶೀರ್ಷಿಕೆ 2203-00-104-0-09-101-ಯೋಜನೆಯಡಿಯಲ್ಲಿನ ರೂ. 50.00 ಲಕ್ಷಗಳನ್ನು ಲೆಕ್ಕ ಶೀರ್ಷಿಕೆ 2203-00-105-0-01-051-ಯೋಜನೆಗೆ ಮರುಹೊಂದಾಣಿಕೆ ಮಾಡಿ ಆದೇಶಿಸಲಾಗಿದೆ. ಉಲ್ಲೇಖ (3) ರಲ್ಲಿ ಸರ್ಕಾರಿ ಪಾಲಿಟೆಕ್ನಿಕ್‌ಗಳಗೆ ರಾಷ್ಟ್ರೀಯ ಮಾನ್ಯತಾ ಮಂಡಳ (National Board of Accreditation), ನವದೆಹಲಿ ಇವರಿಂದ ಮಾನ್ಯತೆ ಪಡೆಯುವ ಸಲುವಾಗಿ 17 ಸರ್ಕಾರಿ ಪಾಲಿಟೆಕ್ನಿಕ್‌ಗಳಗೆ ಅನುದಾನವನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

ಈ ದಿಸೆಯಲ್ಲಿ ಅನುಬಂಧ-1 ರಲ್ಲಿ ಸರ್ಕಾರಿ ಪಾಲಿಟೆಕ್ನಿಕ್‌ಗಳಗೆ 2015-16 ನೇ ಸಾಲಿನ ಆಯವ್ಯಯದ ಯೋಜನಾ ಲೆಕ್ಕ ಶೀರ್ಷಿಕೆ 2203-00-105-0-01-051-ಸಾಮಾನ್ಯ ವೆಚ್ಚದಡಿ ಒಟ್ಟು ರೂ. 19,46,500/- (ರೂಪಾಯಿ ಹತ್ತೊಂಬತ್ತು ಲಕ್ಷದ ನಲವತ್ತಾರು ಸಾವಿರದ ಐನ್ನೂರು ಮಾತ್ರ) ಗಳನ್ನು ರಾಷ್ಟ್ರೀಯ ಮಾನ್ಯತಾ ಮಂಡಳ, ನವದೆಹಲಿ ಇವರಿಂದ ಮಾನ್ಯತೆ ಪಡೆಯುವ ಸಲುವಾಗಿ ಮೊದಲ ಹಂತದ ನೊಂದಣಿ ಶುಲ್ಕವನ್ನು ಭರಿಸಲು ಅನುದಾನವನ್ನು ಬಿಡುಗಡೆ ಮಾಡಿ ಆದೇಶಿಸಲಾಗಿದೆ.

ಈಗ ಬಿಡುಗಡೆ ಮಾಡಲಾಗಿರುವ ಅನುದಾನದಲ್ಲಿ ರಾಷ್ಟ್ರೀಯ ಮಾನ್ಯತಾ ಮಂಡಳಿ (National Board of Accreditation), ನವದೆಹಲಿಯೊಂದಿಗೆ ನೊಂದಣಿ ಮಾಡಿಕೊಳ್ಳವುದು ಹಾಗೂ ದಿನಾಂಕ 16-03-2016 ರೊಳಗಾಗಿ ಎ.ಸಿ ಬಿಲ್ಲಿನಲ್ಲಿ ಡ್ರಾ ಮಾಡಲು ಹಾಗೂ ರೂ. 1,14,500/- ಮೊತ್ತಕ್ಕೆ ಡಿ.ಡಿನ್ನು National Board of Accreditation, New Delhi, ರವರ ಹೆಸರಿನಲ್ಲಿ ಪಡೆದು e-NBA web portal ಮೂಲಕ ಡಿಡಿಯನ್ನು ನೊಂದಾಯಿಸಿ, ಇದನ್ನು The Chairman, National Board of Accreditation, NBCC Place, East Tower, 4th Floor, Bishma Pitamaha Marg, Pragathi Vihar, New Delhi-110 003 ಗೆ ಕಳುಹಿಸಿ, ತಮ್ಮ ಸಂಸ್ಥೆಗಳಿಗೆ user id & password ಗಳನ್ನು ಪಡೆಯಲು ಅಗತ್ಯ ಕ್ರಮ ಕೈಗೊಳ್ಳಲು ಅನುಮತಿ ಹಾಗೂ ಸೂಚನೆಯನ್ನು ನೀಡಲಾಗಿದೆ. ಎ.ಸಿ ಬಿಲ್ಲುಗಳನ್ನು ಡ್ರಾ ಮಾಡಿದ ನಂತರ ಒಂದು ತಿಂಗಳೊಳಗಾಗಿ ಎನ್‌ಡಿಸಿ ಬಿಲ್ಲುಗಳನ್ನು ತಯಾರಿಸಿ ತೀರುವಳಿ ಪಡೆಯಲು ಸೂಚಿಸಲಾಗಿದೆ.

ಈಗ ಬಿಡುಗಡೆ ಮಾಡಿರುವ ಈ ಅನುದಾನವನ್ನು ಯಾವ ಉದ್ದೇಶಕ್ಕೆ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಮಾತ್ರ ಬಳಸುವುದು.

ನಿರ್ದೇಶಕರು,
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು.

ಇವರಿಗೆ:

1. ಸಂಬಂಧಪಟ್ಟ ಪ್ರಿನ್ಸಿಪಾಲರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.

ಪ್ರತಿ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು-01
2. ಖಜಾನಾಧಿಕಾರಿಯವರು, ರಾಜ್ಯ ಹುಜೂರ್ ಖಜಾನೆ
3. ಜಂಟಿ ನಿರ್ದೇಶಕರು (ಆಡಳಿತ) / (ಎಟಿಎಸ್) / (ಸಿಡಿಸಿ)
4. ಉಪ ನಿರ್ದೇಶಕರು (ಯೋಜನೆ)
5. ಎಲ್‌ಆರ್‌ಡಿಸಿ ವಿಭಾಗಕ್ಕೆ
6. ಆಕ್ಟಿವೇಷನ್ ಕಡತಕ್ಕೆ.

ಬಂದ–1

## National Board of Accreditation, ನವದೆಹಲಿ ಇವರಿಂದ ಮಾನ್ಯತೆ ಪಡೆಯುವ ಸಲುವಾಗಿ ಅನುದಾನ ಬಿಡುಗಡೆ

| ಕ್ರಮ ಸಂಖ್ಯೆ | ಸಂಸ್ಥೆಯ ಹೆಸರು | ಡ್ರಾಯಿಂಗ್ ಆಫೀಸರ್ ಕೋಡ್ | ಲೆಕ್ಕ ಶೀರ್ಷಿಕೆ 2203-00-105-0-01-051 (ರೂ.ಗಳಲ್ಲಿ) | | |
|---|---|---|---|---|---|
| | | | NBA Registration Fee | Service Tax @14.5% | ಒಟ್ಟು ಅನುದಾನ |
| 1 | ಎಸ್.ಜೆ. ಸರ್ಕಾರಿ ಪಾಲಿಟೆಕ್ನಿಕ್, ಬೆಂಗಳೂರು | 0200 ET 0005 | 1,00,000 | 14,500 | 1,14,500 |
| 2 | ಕರ್ನಾಟಕ ಪಾಲಿಟೆಕ್ನಿಕ್ ಮಂಗಳೂರು. | 1900 ET 0002 | 1,00,000 | 14,500 | 1,14,500 |
| 3 | ಡಿ.ಆರ್.ಆರ್.ಸರ್ಕಾರಿ ಪಾಲಿಟೆಕ್ನಿಕ್, ದಾವಣಗೆರೆ. | 1700 ET 0021 | 1,00,000 | 14,500 | 1,14,500 |
| 4 | ಸರ್ಕಾರಿ ಡಿ.ಎ.ಸಿ.ಜಿ. ಪಾಲಿಟೆಕ್ನಿಕ್, ಚಿಕ್ಕಮಗಳೂರು. | 1800 ET 0058 | 1,00,000 | 14,500 | 1,14,500 |
| 5 | ಸರ್ಕಾರಿ ಪಾಲಿಟೆಕ್ನಿಕ್, ಚನ್ನಪಟ್ಟಣ | 0401 ET 0001 | 1,00,000 | 14,500 | 1,14,500 |
| 6 | ಶ್ರೀಮತಿ ಎಲ್.ವಿ.ಪಾಲಿಟೆಕ್ನಿಕ್, ಹಾಸನ | 1300 ET 0001 | 1,00,000 | 14,500 | 1,14,500 |
| 7 | ಸರ್ಕಾರಿ ಪಾಲಿಟೆಕ್ನಿಕ್, ತುಮಕೂರು | 0800 ET 0001 | 1,00,000 | 14,500 | 1,14,500 |
| 8 | ಸರ್ಕಾರಿ ಪಾಲಿಟೆಕ್ನಿಕ್, ಬೆಳಗಾವಿ. | 2200ET0001 | 1,00,000 | 14,500 | 1,14,500 |
| 9 | ಸರ್ಕಾರಿ ಪಾಲಿಟೆಕ್ನಿಕ್, ಗುಲ್ಬರ್ಗ. | 3200 ET 0001 | 1,00,000 | 14,500 | 1,14,500 |
| 10 | ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ | 0602 ET 6383 | 1,00,000 | 14,500 | 1,14,500 |
| 11 | ವಿ.ಐ.ಎಸ್.ಎಸ್.ಜೆ. ಸರ್ಕಾರಿ ಪಾಲಿಟೆಕ್ನಿಕ್, ಭದ್ರಾವತಿ. | 1401 ET 0002 | 1,00,000 | 14,500 | 1,14,500 |
| 12 | ಸರ್ಕಾರಿ ಪಾಲಿಟೆಕ್ನಿಕ್, ಬಿಜಾಪುರ. | 2800 ET 6382 | 1,00,000 | 14,500 | 1,14,500 |
| 13 | ಸರ್ಕಾರಿ ಪಾಲಿಟೆಕ್ನಿಕ್, ಚಾಮರಾಜನಗರ | 1000 ET 0001 | 1,00,000 | 14,500 | 1,14,500 |
| 14 | ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್, ಮೈಸೂರು | 0900 ET 0001 | 1,00,000 | 14,500 | 1,14,500 |
| 15 | ಸರ್ಕಾರಿ ಪಾಲಿಟೆಕ್ನಿಕ್, ಕೆ.ಆರ್.ಪೇಟೆ | 1101 ET 0001 | 1,00,000 | 14,500 | 1,14,500 |
| 16 | ಸರ್ಕಾರಿ ಪಾಲಿಟೆಕ್ನಿಕ್, ಗಜೇಂದ್ರಗಡ | 2651 ET 0001 | 1,00,000 | 14,500 | 1,14,500 |
| 17 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹುಬ್ಬಳ್ಳಿ. | 3100 ET 0041 | 1,00,000 | 14,500 | 1,14,500 |
| | ಒಟ್ಟು | | 17,00,000 | 2,46,500 | 19,46,500 |

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು.